## ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.

**ಸ್ಪೇಷಲ್ ಕೇಸ್ ನಂ : 132/2017**

**ಚಾ.ಸಾ : 7 ಪ್ರಾ.ಸಾ : 5**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 04.02.2023**

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀನಿವಾಸ ಆರ್.ಕೆ |
| ತಂದೆಯ ಹೆಸರು | : | ರಾಮನಗೌಡ ಕಂಪ್ಲಿ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಜ್ಯೂನಿಯರ್ ಅಸಿಸ್ಟೇಂಟ್ |
| ವಿಳಾಸ | : | ಬೆಂಗಳೂರ |

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭೀಯೋಜಕರಿಂದ**

ನಾನು ಎನ್.ಈ.ಕೆ.ಆರ್.ಟಿ.ಸಿ ಯ ವಿಭಾಗೀಯ ಕಛೇರಿಯಲ್ಲಿ 2014 ರಿಂದ 2017 ರ ವರೆಗೆ ಕಿರಿಯ ಸಹಾಯಕ ಎಂದು ಕೆಲಸ ಮಾಡುತ್ತಿದ್ದೆ.

ದಿ.02.03.2016 ರಂದು ಚಾ.ಸಾ-47 ರವರು ಲೋಕಾಯುಕ್ತ ಪೋಲಿಸರು ನಮ್ಮ ಕಛೇರಿಗೆ ಬಂದಿದ್ದರು. ನಮ್ಮ ಮೇಲಾಧಿಕಾರಿಗಳು ಸದರಿ ಚಾ.ಸಾ-47 ರವರ ಜೊತೆ ಹೋಗಲು ಅನುಮತಿ ಕೊಟ್ಟಿರುತ್ತಾರೆ. ನಂತರ ಲೋಕಾಯುಕ್ತ ಕಛೇರಿಗೆ ಹೋದಾಗ ಅಲ್ಲಿ ಆರೋಪಿ ನಂ.1 ಇವರು ಇದ್ದರು. ಸದರಿ ಚಾ.ಸಾ-47 ರವರು ಲೋಕಾಯುಕ್ತ ಕಛೇರಿಯಲ್ಲಿ ನನಗೆ ಹೇಳಿದ್ದೇನೆಂದರೆ, ಹೀರೆಬೂದೂರು ಗ್ರಾಮ ಪಂಚಾಯತಿಯ ಆಶ್ರಯ ಕಾಲೋನಿಯಲ್ಲಿ ಅಕ್ರಮ ನಡೆದಿದೆ ಮತ್ತು ನನಗೆ ಪಂಚರಾಗಲು ಹೇಳಿದರು. ನನ್ನ ಜೊತೆಗೆ ಚಾ.ಸಾ-6 ರವರು ಸಹ ಪಂಚರಾಗಿ ಇದ್ದರು. ಸದರಿ ಚಾ.ಸಾ-47 ರವರು ಆರೋಪಿ ನಂ.1 ಇವರ ಮನೆಯಲ್ಲಿ ಪಂಚಾಯತಿಯ ಅವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಶೋಧನೆ ಮಾಡುವುದು ಇದೆ ಎಂದು ರಾಯಚೂರಿನ ಬೋಳಮಾನದೊಡ್ಡಿಯಲ್ಲಿರುವ ಆರೋಪಿ ನಂ.1 ಇವರ ಮನೆಗೆ ಕರೆದುಕೊಂಡು ಹೋದರು. ಮಧ್ಯಾನ್ಹ 12.00 ಗಂಟೆಗೆ ಲೋಕಾಯುಕ್ತ ಕಛೇರಿ ಬಿಟ್ಟು ಆರೋಪಿ ನಂ.1 ಇವರ ಮನೆಗೆ ಹೋದಾಗ 12.30 ಗಂಟೆ ಆಗಿತ್ತು. ಆರೋಪಿ ನಂ.1 ಇವರ ಮನೆ ಉತ್ತಕ್ಕೆ ಇತ್ತು. ಅಲ್ಲಿ ಚಾ.ಸಾ-47 ರವರು ನಮ್ಮ ಸಮಕ್ಷಮ ಎರಡು ಅಲಮಾರಿಗಳನ್ನು ಪರೀಕ್ಷಿಸಿದಾಗ ಅಲ್ಲಿ ಬಟ್ಟೆ, ಸೀರೆಗಳು ಮತ್ತು ಕೆಲವು ದಾಖಲೆಗಳು ಇದ್ದವು. ಆದರೆ ಅಲಮಾರಗಳಲ್ಲಿ ಪಂಚಾಯತಿಯಲ್ಲಿ ಅವ್ಯವಹಾರ ಆದ ಬಗ್ಗೆ ಯಾವುದೇ ದಾಖಲೆಗಳು ಸಿಗಲಿಲ್ಲ. ನಂತರ ಪೋಲಿಸರು ಪಂಚನಾಮೆಯನ್ನು ಕಂಪ್ಯೂಟರ್ ನಲ್ಲಿ ಟೈಪ್ ಮಾಡಿರುತ್ತಾರೆ.

ಸಾಕ್ಷಿ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದು ದಾಖಲೆಗಳ ಶೋಧನಾ ಪಂಚನಾಮೆ ಇದ್ದು, ಸದರಿ ಪಂಚನಾಮೆಯನ್ನು ನಿ.ಪಿ-25 ಎಂದು ಗುರುತಿಸಲಾಯಿತು ಮತ್ತು ಅದರಲ್ಲಿರುವ ಸಾಕ್ಷಿ ಸಹಿಗಳನ್ನು ನಿ.ಪಿ-25(ಎ) ರಿಂದ 25(ಸಿ) ಎಂದು ಗುರುತಿಸಲಾಯಿತು. ಸಹ ಪಂಚರಾದ ಪ್ರಭಾವತಿ ಚಾಸಾ-6 ಇವರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ-25(ಡಿ) ರಿಂದ 25(ಎಫ್) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ನಂ.2 ಪರ ಶ್ರೀ ಕೆ.ಡಿ.ಎನ್ ವಕೀಲರಿಂದ</u>**

ಚಾ.ಸಾ-47 ರವರು ನಮ್ಮ ಕಛೇರಿಗೆ ಬಂದಾಗ ನಮ್ಮ ಮೇಲಾಧಿಕಾರಿಗಳಿಗೆ ಪಂಚನಾಮೆ ಮಾಡಲು ಕರೆದುಕೊಂಡು ಹೋಗಲು ಮೌಖಿಕವಾಗಿ ಆದೇಶ ಮಾಡಿರುತ್ತಾರೆ. ಆದರೆ ಲಿಖಿತ ಆದೇಶ ನೀಡಿರುವುದಿಲ್ಲ. ನಾವು ಆರೋಪಿ ನಂ.1 ಇವರ ಮನೆಯಲ್ಲಿ ಮಧ್ಯಾನ್ಹ 12.30 ರಿಂದ 03.00 ಗಂಟೆ ವರೆಗೆ ಇದ್ದೆವು. ಆ ದಿನ ನಾನು ಪಂಚನಾಮೆಗೆ ಹೋದ ಬಗ್ಗೆ ನಮ್ಮ ಮೇಲಾಧಿಕಾರಿಗಳು ನನಗೆ ನೀಡಿದ ಯಾವುದೇ ಆದೇಶ ಹಾಜರುಪಡಿಸಿರುವುದಿಲ್ಲ. ನನಗೆ ನಮ್ಮ ಕಛೇರಿಯಿಂದ ಚಾ.ಸಾ-47 ರವರು ಕರೆದುಕೊಂಡು ಹೋಗುವಾಗ ಯಾಕೆ ನನ್ನನ್ನು ಪಂಚನಾಮೆಗೆ ಕರೆದುಕೊಂಡು ಹೋಗುತ್ತಾರೆ ಎಂದು ಹೇಳಿರುವುದಿಲ್ಲ. ನನಗೆ ನಿ.ಪಿ-25 ರ ಚೆಕ್ಕಬಂದಿ ಹೇಳಲು ಆಗುವುದಿಲ್ಲ. ನಿ.ಪಿ-25 ಕ್ಕೆ ಲೋಕಾಯುಕ್ತ ಪೋಲಿಸರು ನಾನು ಕೆಲಸ ಮಾಡುವ ಸ್ಥಳಕ್ಕೆ ಬಂದು ಸಹಿ ಪಡೆದುಕೊಂಡಿರುತ್ತಾರೆ ಮತ್ತು ಸದರಿ ನಿ.ಪಿ-25 ಅನ್ನು ನನ್ನ ಸಮಕ್ಷಮ ಟೈಪ್ ಮಾಡಿ ನನ್ನ ಸಹಿಯನ್ನು ಗಣಕೀಕೃತ ಮಾಡಿ ಸಹಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಲೋಕಾಯುಕ್ತ ಪೋಲಿಸರು ನನ್ನನ್ನು ಹೆದರಿಸಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಆರೋಪಿ ನಂ.3 ಮತ್ತು 4 ರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಈ ಹಂತದಲ್ಲಿ ಆರೋಪಿ ನಂ.5 ಮತ್ತು 6 ಪರ ವಕೀಲರನ್ನು ಕೂಗಿ ಕರೆಯಲಾಗಿ ಗೈರು ಹಾಜರಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಎರಡನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ರಾಯಚೂರು.